

ಪಾಕ್ ವೇಗಿ ರೌಫ್ ವಿರುದ್ಧ ಚೆಂಡು ವಿರೂಪದ ಆರೋಪ

ಡಲ್ಲಾಸ್: ಪಾಕಿಸ್ತಾನದ ವೇಗದ ಬೌಲರ್ ಹ್ಯಾರಿಸ್ ರೌಫ್ ವಿರುದ್ಧ ಯುಎಸ್‌ಎ ಕ್ರಿಕೆಟಿಗ ರಸ್ಟಿ ಥೆರಾನ್ ಚೆಂಡು ವಿರೂಪಗೊಳಿಸಿದ ಆರೋಪ ಮಾಡಿದ್ದಾರೆ. ಅಮೆರಿಕ ವಿರುದ್ಧದ ಪಂದ್ಯದಲ್ಲಿ ಬೌಲಿಂಗ್ ನಡೆಸುವ ವೇಳೆ ಪಾಕಿಸ್ತಾನ 13ನೇ ಓವರ್‌ಗೂ ಮುನ್ನ ಚೆಂಡನ್ನು ಬದಲಿಸಿತ್ತು. 14ನೇ ಓವರ್ ಮಾಡಲು ರನ್ ಅಪ್‌ನತ್ತ ಸಾಗುತ್ತಿದ್ದಾಗ ರೌಫ್ ತಮ್ಮ ಕೈ ಉಗುರಿನಿಂದ ಚೆಂಡನ್ನು ವಿರೂಪಗೊಳಿಸಿದ್ದಾರೆ. ಇದರಿಂದ ಚೆಂಡು ರಿವರ್ಸ್ ಸ್ವಿಂಗ್ ಪಡೆಯಲು ಸಾಧ್ಯವಾಯಿತು. ಇದರಿಂದಾಗಿ ಮೊದಲ ಎಸೆತದಲ್ಲೇ ಆ್ಯಂಡ್ರೀಸ್ ಗೌಸ್ ಕ್ಲೀನ್ ಬೌಲ್ಡ್ ಆಗಿದ್ದರು. ಇದನ್ನು ಐಸಿಸಿ ಗಂಭೀರವಾಗಿ ಪರಿಗಣಿಸಬೇಕು ಎಂದು ರಸ್ಟಿ ಥೆರಾನ್ ಆಗ್ರಹಿಸಿದ್ದಾರೆ. ಈ ವಿಚಾರವನ್ನು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು ಐಸಿಸಿಯನ್ನು ಟ್ಯಾಗ್ ಮಾಡಿದ್ದಾರೆ.

ಅಕ್ಟೋಬರ್‌ನಿಂದ ಈ ವರ್ಷದ ರಣಜಿ ಕೂಟ ಆರಂಭ: ಬಿಸಿಸಿಐ

ಮುಂಬೈ: 2024-25ನೇ ಸಾಲಿನ ದೇಸಿ ಕ್ರಿಕೆಟ್ ಪಂದ್ಯಾವಳಿಗಳ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ರಣಜಿ ಪಂದ್ಯಾವಳಿಗಳು 2 ಹಂತದಲ್ಲಿ ನಡೆಯಲಿದ್ದು ಅಕ್ಟೋಬರ್‌ನಲ್ಲಿ ಆರಂಭವಾಗಲಿದೆ. ಫೆಬ್ರವರಿಯಲ್ಲಿ ರಣಜಿ ನಾಕೌಟ್ ಪಂದ್ಯಗಳು ನಡೆಯಲಿವೆ. ದೇಸಿ ಕ್ರಿಕೆಟ್‌ನ ಮೊದಲ ಟೂರ್ನಿ ದುಲೀಪ್ ಟ್ರೋಫಿ ಸೆ.5ರಿಂದ 22ರವರೆಗೆ ನಡೆಯಲಿದೆ. ಇರಾನಿ ಟ್ರೋಫಿ ಅ.1ರಂದು ನಡೆಯಲಿದೆ. ನ.23ರಿಂದ ಡಿ.15ರವರೆಗೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಹಾಗೂ ಡಿ.21ರಿಂದ ಜ.18ರವರೆಗೆ ವಿಜಯ್ ಹಜಾರೆ ಟ್ರೋಫಿಯ ಪಂದ್ಯಗಳು ನಡೆಯಲಿವೆ.

ದಯನೀಯ ಪ್ರದರ್ಶನ: ಪಾಕ್ ಸೋಲಿಗೆ ಅಕ್ರಮ್ ಟೀಕೆ

ಡಲ್ಲಾಸ್: ಅಮೆರಿಕ ವಿರುದ್ಧ ಸೂಪರ್ ಓವರ್‌ನಲ್ಲಿ ಸೋತಿರುವ ಪಾಕಿಸ್ತಾನ ಕ್ರಿಕೆಟ್ ತಂಡದ ವಿರುದ್ಧ, ದಿಗ್ಗಜ ವೇಗಿ ವಾಸಿಮ್ ಅಕ್ರಮ್ ವ್ಯಂಗ್ಯವಾಡಿದ್ದಾರೆ. ಕರುಣಾಜನಕ ಪ್ರದರ್ಶನ ಎಂದು ಪಾಕ್ ಆಟವನ್ನು ಅಕ್ರಮ್ ಕರೆದಿದ್ದಾರೆ. ಪಂದ್ಯದ ಬಗ್ಗೆ ಮಾತನಾಡಿರುವ ವಾಸಿಂ ಅಕ್ರಮ್, ಇದೊಂದು ಕರುಣಾಜನಕ ಪ್ರದರ್ಶನ. ಸೋಲು-ಗೆಲುವು ಆಟದ ಭಾಗ. ಆದರೆ ನೀವು ಕೊನೇ ಎಸೆತದವರೆಗೂ ಹೋರಾಡಬೇಕು. ಈ ಸೋಲು ಪಾಕ್ ಕ್ರಿಕೆಟ್‌ಗೆ ಒಳ್ಳೆಯದಲ್ಲ ಎಂದು ಎಚ್ಚರಿಸಿದ್ದಾರೆ. ಅಮೆರಿಕ ವಿರುದ್ಧದ ಸೋಲಿನ ಬಳಿಕ ಪಾಕಿಸ್ತಾನ ತಂಡ ಸೂಪರ್-8ಕ್ಕೇರಲು ಪರದಾಡಲಿದೆ ಎಂದೂ ಅಕ್ರಮ್ ಭವಿಷ್ಯ ನುಡಿದಿದ್ದಾರೆ.

ನ್ಯೂಯಾರ್ಕ್ ಪಿಚ್‌ನ ಕಳಪೆ ಗುಣಮಟ್ಟಕ್ಕೆ ಹೆಚ್ಚು ಪಂದ್ಯಗಳು ಆಗದಿರುವುದೇ ಕಾರಣ: ಐಸಿಸಿ

ನ್ಯೂಯಾರ್ಕ್: ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ ನಾಸಾವು ಕೌಂಟಿ ಕ್ರಿಕೆಟ್ ಮೈದಾನದಲ್ಲಿ ನಿರಂತರ ಪಂದ್ಯಗಳು ನಡೆದಿಲ್ಲವಾದ್ದರಿಂದ ಅಲ್ಲಿನ ಪಿಚ್ ಸುಧಾರಿಸಿಲ್ಲ, ಪಿಚ್ ಸುಧಾರಿಸುವ ಪ್ರಯತ್ನ ನಡೆಯುತ್ತಿದೆ ಎಂದು ಐಸಿಸಿ ಹೇಳಿದೆ. ಟಿ20 ವಿಶ್ವಕಪ್ ಪಂದ್ಯಗಳನ್ನು ನಡೆಸಲಾಗುತ್ತಿರುವ ನ್ಯೂಯಾರ್ಕ್ ಪಿಚ್‌ನ ಬಗ್ಗೆ ಅಪಸ್ವರಗಳು ಕೇಳಿಬಂದ ಹಿನ್ನೆಲೆಯಲ್ಲಿ ಜಾಗತಿಕ ಕ್ರಿಕೆಟ್ ನಿಯಂತ್ರಣ ಮಂಡಳಿ ಈ ಪ್ರತಿಕ್ರಿಯೆ ನೀಡಿದೆ. ಆಸ್ಟ್ರೇಲಿಯಾದಿಂದ ತರಿಸಲಾಗಿರುವ ನಾಸಾವು ಡ್ರಾಪ್ ಇನ್ ಪಿಚ್‌ನಲ್ಲಿ ರನ್ ಗಳಿಸಲು ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದ್ದರು. ಅಲ್ಲದೆ ಗಾಯದ ಭೀತಿ ಮೂಡಿಸಿದ್ದರಿಂದ ಬಹಳಷ್ಟು ಟೀಕೆ ಕೇಳಿಬಂದಿದ್ದವು.

ಅಮೆರಿಕದಲ್ಲಿ ನಮಗೆ ಪಕ್ಷಪಾತ ಮಾಡಲಾಗುತ್ತಿದೆ: ಶ್ರೀಲಂಕಾ!

ನ್ಯೂಯಾರ್ಕ್: ವಿಶ್ವಕಪ್ ಪಂದ್ಯಾವಳಿಗೆ ಅಮೆರಿಕಕ್ಕೆ ಆಗಮಿಸಿರುವ ಶ್ರೀಲಂಕಾ ತಂಡ ಆಯೋಜಕರ ವಿರುದ್ಧ ಪಕ್ಷಪಾತದ ಆರೋಪ ಮಾಡಿದೆ. ಎಲ್ಲಾ ತಂಡಗಳನ್ನು ಅಮೆರಿಕದಲ್ಲಿ ಚೆನ್ನಾಗಿ ನೋಡಿಕೊಳ್ಳಲಾಗುತ್ತಿದೆ. ಆದರೆ ಶ್ರೀಲಂಕಾ ತಂಡವನ್ನು ಕಡೆಗಣಿಸಲಾಗುತ್ತಿದೆ ಎಂದು ಶ್ರೀಲಂಕಾ ಕ್ರೀಡಾ ಸಚಿವ ಹರಿನ್ ಫರ್ನಾಂಡೋ ಆರೋಪಿಸಿದ್ದಾರೆ. ಫ್ಲೋರಿಡಾದಲ್ಲಿ ಶ್ರೀಲಂಕಾ ತಂಡ 7 ಗಂಟೆಗಳ ಕಾಲ ವಿಮಾನಕ್ಕಾಗಿ ಕಾಯ್ದು ಬಳಿಕ ಶ್ರೀಲಂಕಾ ಈ ಆರೋಪ ಮಾಡಿದೆ.

ಬುಡಾಪೆಸ್ಟ್ ಕುಸ್ತಿ: ಅಮನ್ ಸೆಹ್ರಾವತ್‌ಗೆ ಬೆಳ್ಳಿ ಪದಕ

ಬುಡಾಪೆಸ್ಟ್ (ಹಂಗೇರಿ): ಇಲ್ಲಿ ನಡೆದ ಕುಸ್ತಿ ರ‍್ಯಾಂಕಿಂಗ್ ಸೀರೀಸ್‌ನಲ್ಲಿ ಭಾರತದ ಅಮನ್ ಸೆಹ್ರಾವತ್ ಬೆಳ್ಳಿಪದಕ ಗೆದ್ದಿದ್ದಾರೆ. ಪುರುಷರ ಫ್ರೀ ಸ್ಟೈಲ್ ವಿಭಾಗದಲ್ಲಿ ಅಮನ್‌ಗೆ ಬೆಳ್ಳಿ ಒಲಿದಿದೆ. 57 ಕೆಜಿ ವಿಭಾಗದ ಫೈನಲ್‌ನಲ್ಲಿ ಅಮನ್, ಜಪಾನ್‌ನ ರೆಯಿ ಹಿಗುಚಿ ವಿರುದ್ಧ 11-1 ಅಂತರದಿಂದ ಸೋತು ಬೆಳ್ಳಿಗೆ ತೃಪ್ತಿಪಟ್ಟಿದ್ದಾರೆ.

ವಿಶ್ವಕಪ್‌ನಲ್ಲಿಂದು ಒಂದೇ ದಿನ 4 ಪಂದ್ಯ

9ನೇ ಆವೃತ್ತಿಯ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಶನಿವಾರ (ಭಾರತೀಯ ಕಾಲಮಾನದಂತೆ) ಒಂದೇ ದಿನ ಒಟ್ಟು ನಾಲ್ಕು ಪಂದ್ಯಗಳು ನಡೆಯುತ್ತಿವೆ. ಮುಂಜಾನೆ 5 ಗಂಟೆಗೆ ಮೊದಲ ಪಂದ್ಯ ಆರಂಭವಾದರೆ ರಾತ್ರಿ 10.30ಕ್ಕೆ ಕೊನೆ ಪಂದ್ಯ ಶುರುವಾಗಲಿದೆ. ಮತ್ತೆರಡು ಪಂದ್ಯಗಳಲ್ಲಿ ಒಂದು ಪಂದ್ಯ 6 ಗಂಟೆಗೆ ಆರಂಭವಾದರೆ ಮತ್ತೊಂದು 8 ಗಂಟೆಗೆ ಆರಂಭವಾಗಲಿದೆ. ಮೊದಲ ಪಂದ್ಯದಲ್ಲಿ ಆಡುವ ಮೂಲಕ ನ್ಯೂಜಿಲೆಂಡ್ ವಿಶ್ವಕಪ್ ಅಭಿಯಾನ ಆರಂಭಿಸಿದರೆ, ಕೊನೆ ಪಂದ್ಯದಲ್ಲಿ 2 ಬಲಿಷ್ಠ ತಂಡಗಳಾದ ಇಂಗ್ಲೆಂಡ್, ಆಸ್ಟ್ರೇಲಿಯಾ ಮುಖಾಮುಖಿಯಾಗಲಿವೆ.

ಇಂಗ್ಲೆಂಡ್ vs ಆಸ್ಟ್ರೇಲಿಯಾ

ಬ್ರಿಡ್ಜ್‌ಟೌನ್: ಹಾಲಿ ಚಾಂಪಿಯನ್ ಇಂಗ್ಲೆಂಡ್ ಶನಿವಾರದ ಟಿ20 ವಿಶ್ವಕಪ್ ಮುಖಾಮುಖಿಯಲ್ಲಿ ಸಾಂಪ್ರದಾಯಿಕ ಎದುರಾಳಿ ಆಸ್ಟ್ರೇಲಿಯಾವನ್ನು ಎದುರಿಸಲಿದ್ದು, ಗೆಲ್ಲಲೇಬೇಕಾದ ಒತ್ತಡದಲ್ಲಿದೆ.

ಇನ್ನೊಂದೆಡೆ ಒಮಾನ್ ವಿರುದ್ಧ 39 ರನ್ನಿಂದ ಗೆದ್ದಿರುವ ಆಸ್ಟ್ರೇಲಿಯಾ ಈಗಾಗಲೇ ಖಾತೆ ತೆರೆದಿದೆ. ಬಟ್ಲರ್ ಪಡೆಯನ್ನೂ ಮಣಿಸಿದರೆ ಆಸೀಸ್ ಮುನ್ನಡೆ ಸುಗಮಗೊಳ್ಳಲಿದೆ. ಸ್ಕಾಟ್ಲೆಂಡ್ ವಿರುದ್ಧ ಇಂಗ್ಲೆಂಡ್ ಬೌಲಿಂಗ್ ಸಂಪೂರ್ಣ ವೈಫಲ್ಯ ಕಂಡಿತ್ತು. ವುಡ್, ಆರ್ಚರ್, ಜೋರ್ಡನ್, ಅಲಿ, ರಶೀದ್‌ರನ್ನೊಳಗೊಂಡ ಬೌಲಿಂಗ್ ಪಡೆಗೆ ಒಂದೂ ವಿಕೆಟ್ ಉರುಳಿಸಲಾಗಿರಲಿಲ್ಲ, ಸ್ಕಾಟ್ಲೆಂಡ್ 10 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 90 ರನ್ ಪೇರಿಸಿತ್ತು.

ಒಮಾನ್ ವಿರುದ್ಧ ಆಸ್ಟ್ರೇಲಿಯದ ಪ್ರಧಾನ ವೇಗಿ ಪ್ಯಾಟ್ ಕಮಿನ್ಸ್ ಆಡಿರಲಿಲ್ಲ, ಇವರ ಬದಲು ಅವಕಾಶ ಪಡೆದ ನಥನ್ ಎಲ್ಲಿಸ್ ಗಮನಾರ್ಹ ಪ್ರದರ್ಶನ ನೀಡಿದ್ದರು. ಇಂಗ್ಲೆಂಡ್ ವಿರುದ್ಧ ಕಮಿನ್ಸ್ ಪ್ರವೇಶವಾಗಲಿದೆ.

ಅಂಕಣ ಗುಟ್ಟು

ಇಲ್ಲಿನ ಪಿಚ್ ಸ್ಪಿನ್ನರ್ ಸ್ನೇಹಿಯಾಗಿದೆ. ಪಂದ್ಯ ಸಾಗಿದಂತೆ ಪಿಚ್ ಮತ್ತಷ್ಟು ನಿಧಾನಗೊಳ್ಳುವುದರಿಂದ ಟಾಸ್ ಗೆದ್ದ ತಂಡ ಮೊದಲು ಬ್ಯಾಟಿಂಗ್ ಆಯ್ದುಕೊಳ್ಳುವ ಸಾಧ್ಯತೆಗಳು ದಟ್ಟವಾಗಿದೆ ಎನ್ನಲಾಗಿದೆ.

- **ಸ್ಥಳ:** ಕೆನ್ಸಿಂಗ್‌ಟನ್ ಓವಲ್, ಬಾರ್ಬಡೋಸ್
- **ಸಮಯ:** ರಾತ್ರಿ: 10.30
- **ನೇರಪ್ರಸಾರ:** ಸ್ಟಾರ್‌ಸ್ಪೋರ್ಟ್ಸ್ (ಟೀವಿ), ಡಿಸ್ನಿಹಾಟ್‌ಸ್ಟಾರ್ (ಆ್ಯಪ್)

ನ್ಯೂಜಿಲೆಂಡ್‌ಗೆ ಅಫ್ಘಾನಿಸ್ತಾನ ಸ್ಪಿನ್ ಬೌಲಿಂಗ್‌ನ ಸವಾಲು

ಗಯಾನಾ: ಗಯಾನಾದ ಪ್ರಾವಿಡೆನ್ಸ್ ಮೈದಾನದಲ್ಲಿ ನಡೆಯುವ ಟಿ20 ವಿಶ್ವಕಪ್ ಪಂದ್ಯದಲ್ಲಿ ಕ್ರಿಕೆಟ್ ಲೋಕದ ಉದಯೋನ್ಮುಖ ಅಫ್ಘಾನಿಸ್ತಾನ ಮತ್ತು ಅನುಭವಿ ನ್ಯೂಜಿಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. ಗ್ರೂಪ್ 'ಸಿ' ಪಂದ್ಯ ಇದಾಗಿದ್ದು, ಅಫ್ಘಾನಿಸ್ತಾನ ತಂಡ ಮೊದಲ ಪಂದ್ಯದಲ್ಲಿ ಗೆದ್ದಿದ್ದರೆ, ಕಿವೀಸ್‌ಗಿದು ಟೂರ್ನಿಯ ಮೊದಲ ಪಂದ್ಯ.

ಟೂರ್ನಿಯಲ್ಲಿ ಆಡಿದ ಮೊದಲ ಪಂದ್ಯದಲ್ಲಿ ಆಫ್ಘನ್ ತಂಡ ಉಗಾಂಡ ವಿರುದ್ಧ 125 ರನ್‌ಗಳ ಜಯ ಗಳಿಸಿತ್ತು. ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಎರಡೂ ತಂಡಗಳಲ್ಲಿ ಪ್ರತಿಭಾನ್ವಿತ ಆಟಗಾರರಿರುವುದರಿಂದ ಪಂದ್ಯ ಕುತೂಹಲ ಮೂಡಿಸಿದೆ. ಅಫ್ಘಾನಿಸ್ತಾನದಲ್ಲಿ ಗುರ್ಬಾಜ್, ಓಮರ್‌ಜಾಯ್, ರಶೀದ್ ಮತ್ತು ನವೀನ್ ಉಲ್ ಹಕ್ ಮೇಲೆ ಹೆಚ್ಚಿನ ನಿರೀಕ್ಷೆಯಿದ್ದರೆ, ನ್ಯೂಜಿಲೆಂಡ್‌ಗೆ ರಚಿನ್, ಡೇರಿಲ್ ಮಿಚೆಲ್, ಟ್ರೆಂಟ್ ಬೌಲ್ಟ್ ಬಲ ತುಂಬಲಿದ್ದಾರೆ.

ಅಂಕಣಗುಟ್ಟು: ಗಯಾನದ ಪ್ರಾವಿಡೆನ್ಸ್ ಮೈದಾನ ಬೌಲರ್‌ಗಳಿಗೆ ಹೆಚ್ಚು ಆದ್ಯತೆ ನೀಡುವ ಪಿಚ್ಚಾಗಿದೆ. ಇಲ್ಲಿ ಮೊದಲ ಇನ್ನಿಂಗ್ಸ್ ಸರಾಸರಿ ಸ್ಕೋರ್ 128. ಹೀಗಾಗಿ ಮತ್ತೊಮ್ಮೆ ಸಾಧಾರಣ ಮೊತ್ತ ದಾಖಲಾಗುವ ನಿರೀಕ್ಷೆ ಇದೆ.

- **ಸ್ಥಳ:** ಪ್ರಾವಿಡೆನ್ಸ್ ಮೈದಾನ, ಗಯಾನ.
- **ಸಮಯ:** ಬೆಳಗ್ಗೆ 5

ನೆದರ್ಲೆಂಡ್ ಎದುರಾಳಿ: ಒತ್ತಡದಲ್ಲಿ ದಕ್ಷಿಣ ಆಫ್ರಿಕಾ

ನ್ಯೂಯಾರ್ಕ್: ವಿಶ್ವಕಪ್ ಪಂದ್ಯಾವಳಿಗಳಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಕಾಡಿರುವ ನೆದರ್ಲೆಂಡ್ ತಂಡದ ಸವಾಲನ್ನು ಶನಿವಾರ ದಕ್ಷಿಣ ಆಫ್ರಿಕಾ ಎದುರಿಸಲಿದೆ. ಉಭಯ ತಂಡಗಳು ಈ ವಿಶ್ವಕಪ್‌ನಲ್ಲಿ ಗೆಲುವಿನ ಶುಭಾರಂಭ ಮಾಡಿವೆ. ದಕ್ಷಿಣ ಆಫ್ರಿಕಾ ನೇಪಾಳದ ವಿರುದ್ಧ ಗೆದ್ದಿದ್ದರೆ, ನೆದರ್ಲೆಂಡ್ ಶ್ರೀಲಂಕಾ ವಿರುದ್ಧ ಗೆದ್ದಿತ್ತು.

ನೆದರ್ಲೆಂಡ್ ಈವರೆಗೆ ತನ್ನ ಉತ್ತಮ ಕ್ರಿಕೆಟನ್ನು ದಕ್ಷಿಣ ಆಫ್ರಿಕಾದ ವಿರುದ್ಧವೇ ಆಡಿದೆ. ಈ ಹಿಂದಿನ ಟಿ20 ವಿಶ್ವಕಪ್ ಹಾಗೂ ಏಕದಿನ ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾವನ್ನು ಸೋಲಿಸಿದೆ. ಹೀಗಾಗಿ ಹೊಸ ತಂಡದ ಬದಲು, ಅನುಭವಿ ದಕ್ಷಿಣ ಆಫ್ರಿಕಾ ತಂಡವೇ ಒತ್ತಡದಲ್ಲಿದೆ. ಡಿಕಾಕ್, ಮಾರ್ಕರಮ್, ಕ್ಲಾಸೆನ್‌ರಂತಹ ಬಿಗ್ ಹಿಟ್ಟರ್‌ಗಳನ್ನು ಹೊಂದಿರುವುದು ದಕ್ಷಿಣ ಆಫ್ರಿಕಾದ ಬಲವಾದರೂ, ವಿಶ್ವಕಪ್‌ನಲ್ಲಿ ಅಸ್ಥಿರ ಪ್ರದರ್ಶನ ತೋರುತ್ತಿರುವುದು ತಂಡಕ್ಕೆ ಮುಳುವಾಗಬಹುದು.

ಅಂಕಣ ಗುಟ್ಟು: ನ್ಯೂಯಾರ್ಕ್‌ನ ನಾಸಾಉ ಮೈದಾನದಲ್ಲಿ ಈ ಪಂದ್ಯ ನಡೆಯಲಿದ್ದು, ಇಲ್ಲಿ ಈವರೆಗೆ ನಡೆದ ಪಂದ್ಯಗಳಲ್ಲಿ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದ್ದಾರೆ. ಅಲ್ಲದೇ ಈ ಪಿಚ್ ಬಗ್ಗೆ ಭಾರಿ ಟೀಕೆ ವ್ಯಕ್ತವಾಗಿತ್ತು.

- **ಸ್ಥಳ:** ನಾಸಾಉ ಕಂಟ್ರಿ ಮೈದಾನ, ನ್ಯೂಯಾರ್ಕ್
- **ಸಮಯ:** ರಾ. 8.00

ಲಂಕಾ ವಿರುದ್ಧ ಗೆಲುವಿನ ಶುಭಾರಂಭಕ್ಕೆ ಬಾಂಗ್ಲಾ ಪ್ಲಾನ್

ಡಲ್ಲಾಸ್: ಟಿ20 ವಿಶ್ವಕಪ್ 15ನೇ ಪಂದ್ಯದಲ್ಲಿ ಶನಿವಾರ ಬಾಂಗ್ಲಾದೇಶ ಮತ್ತು ಶ್ರೀಲಂಕಾ ತಂಡಗಳು ಸೆಣಸಾಡಲಿವೆ. ಗ್ರೂಪ್ 'ಡಿ'ಯಲ್ಲಿರುವ ಇತ್ತಂಡಗಳಲ್ಲಿ ಶ್ರೀಲಂಕಾ, ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸೋತು ಅಂಕಪಟ್ಟಿಯಲ್ಲಿ ಕೊನೇ ಸ್ಥಾನದಲ್ಲಿದೆ. ಆದರೆ ಬಾಂಗ್ಲಾದೇಶಕ್ಕಿದು ಟೂರ್ನಿಯ ಆರಂಭಿಕ ಪಂದ್ಯ.

ಶ್ರೀಲಂಕಾ-ಬಾಂಗ್ಲಾ ಎರಡೂ ಗೆಲುವಿನ ಖಾತೆ ತೆರೆಯುವ ಆಲೋಚನೆಯಲ್ಲಿವೆ. ಆದರೆ ಆರಂಭಿಕ ಪಂದ್ಯದಲ್ಲಿ ಕೇವಲ 77 ರನ್‌ಗೆ ಆಲೌಟ್ ಆಗಿದ್ದ ಲಂಕಾದ ಮೇಲೆ ಒತ್ತಡ ಹೆಚ್ಚಿದೆ.

ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಲಂಕಾದ ಇಡೀ ಬ್ಯಾಟಿಂಗ್ ಬಳಗ ವೈಫಲ್ಯ ಅನುಭವಿಸಿತ್ತು. ಆದರೆ ಬಾಂಗ್ಲಾ ವಿರುದ್ಧ ನಿಸ್ಸಂಕ, ಕುಸಾಲ್ ಮೆಂಡಿಸ್, ಏಂಜಲೋ ಮ್ಯಾಥ್ಯೂಸ್, ದಸುನ್ ಶನಕ ಮೊದಲಾದ ಅನುಭವಿಗಳ ಬೆಂಬಲದ ಅಗತ್ಯ ತಂಡಕ್ಕಿದೆ.

ಅಂಕಣ ಗುಟ್ಟು: ಡಲ್ಲಾಸ್‌ನ ಗ್ರ್ಯಾಂಡ್ ಪ್ರೈರಿ ಮೈದಾನದಲ್ಲಿ ಬಾಂಗ್ಲಾ-ಶ್ರೀಲಂಕಾ ಕಣಕ್ಕಿಳಿಯುತ್ತಿವೆ. ಇದು ಬ್ಯಾಟಿಂಗ್ ಪಿಚ್ ಆಗಿರುವುದರಿಂದ ಎಚ್ಚರಿಕೆ ಆಟವಾಡುವ ತಂಡಕ್ಕೆ ಉತ್ತಮ ಮೊತ್ತ ಪೇರಿಸಲು ಅವಕಾಶವಿದೆ.

- **ಸ್ಥಳ:** ಗ್ರ್ಯಾಂಡ್ ಪ್ರೈರಿ ಮೈದಾನ, ಡಲ್ಲಾಸ್
- **ಸಮಯ:** ಬೆಳಗ್ಗೆ 6

ಪಾಕ್‌ನ ಗೆಲುವು ಕಸಿದ ಭಾರತೀಯರು

ಮೋನಾಂಕ್ ಪಟೇಲ್, ನೋಷ್ತುಶ್ ಕೆಂಜಿಗೆ, ನೇತ್ರವಾಲ್ಕರ್, ನಿತೀಶ್ ಕುಮಾರ್ ಕಮಾಲ್

ನವದೆಹಲಿ: ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಭಾರತದ ವಿರುದ್ಧ ಪಾಕಿಸ್ತಾನ ಆಡುವುದು ಬಾಕಿಯಿದೆ. ಆದರೂ ಅದಕ್ಕೂ ಮೊದಲೇ ಭಾರತೀಯ ಮೂಲದ ಆಟಗಾರರ ಭರ್ಜರಿ ಆಟದಿಂದಾಗಿ ಸೋಲು ಕಂಡಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾರತದ ಮೂಲದ ಆಟಗಾರರೇ ಇರುವ ಅಮೆರಿಕ ತಂಡ ಪಾಕಿಸ್ತಾನವನ್ನು ಸೋಲಿಸಿ ವಿಶ್ವಕಪ್ ಪಂದ್ಯಾವಳಿ ಮೇಲಿನ ನಿರೀಕ್ಷೆಯನ್ನು ಹೆಚ್ಚು ಮಾಡಿದೆ.

ಪಾಕಿಸ್ತಾನಕ್ಕೆ ಹೋಲಿಸಿದರೆ ಅಮೆರಿಕ ಅತ್ಯಂತ ಅನನುಭವಿ ತಂಡ. ಆದರೂ ಬದ್ಧತೆಯಿಂದ ಕ್ರಿಕೆಟ್ ಆಡಿ ಮಾಜಿ ಚಾಂಪಿಯನ್ ತಂಡವನ್ನು ಮಣಿಸಿದೆ. ಐಸಿಸಿಯ ಖಾಯಂ ಸದಸ್ಯತ್ವ ಪಡೆದುಕೊಂಡಿದ್ದು ಸಾಕಷ್ಟು ವರ್ಷಗಳಿಂದ ಕ್ರಿಕೆಟ್ ಆಡುತ್ತಿರುವ ಪಾಕಿಸ್ತಾನದ ಆಟಗಾರರು ಕಳಪೆ ಆಟ ಪ್ರದರ್ಶಿಸಿ ಸೋಲನುಭವಿಸಿದ್ದಾರೆ.

4ನೇ ಗೆಲುವು: ಐಸಿಸಿಯಿಂದ ಖಾಯಂ ಸದಸ್ಯತ್ವ ಪಡೆದುಕೊಂಡಿರುವ ತಂಡದ ವಿರುದ್ಧ ಅಮೆರಿಕ ತಂಡಕ್ಕೆ ಇದು 4ನೇ ಗೆಲುವು. ವಿಶ್ವಕಪ್‌ಗೂ ಮುನ್ನ ಬಾಂಗ್ಲಾದೇಶದ ವಿರುದ್ಧ 2 ಪಂದ್ಯ ಗೆದ್ದಿದ್ದ ಅಮೆರಿಕ, 2021ರಲ್ಲಿ ಐರ್ಲೆಂಡ್ ತಂಡದ ವಿರುದ್ಧ ಜಯ ಸಾಧಿಸಿತ್ತು. 2024ನೇ ಸಾಲಿನಲ್ಲಿ 9 ಪಂದ್ಯ ಆಡಿರುವ ಅಮೆರಿಕ ತಂಡ 8ರಲ್ಲಿ ಗೆಲುವಿನ ರುಚಿ ಉಂಡಿದೆ.

ಮಿಂಚಿದ ಭಾರತೀಯ ಮೂಲದ ಆಟಗಾರರು

14 ವರ್ಷದ ಸೇಡು

ಅಮೆರಿಕ ಪರವಾಗಿ ಆಡುತ್ತಿರುವ ಮುಂಬೈ ಮೂಲದ ಸೌರಭ್ ನೇತ್ರವಾಲ್ಕರ್ ಪಾಕಿಸ್ತಾನದ ವಿರುದ್ಧ 14 ವರ್ಷದ ಸೇಡು ತೀರಿಸಿಕೊಂಡಿದ್ದಾರೆ. 2010ರಲ್ಲಿ ಸೌರಭ್ ಭಾರತ ಅ-19 ತಂಡವನ್ನು ಪ್ರತಿನಿಧಿಸಿದ್ದರು. 2010ರಲ್ಲಿ ನಡೆದ ಅ-19 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ತಂಡ ಸೋತಿತ್ತು. ಆ ತಂಡದಲ್ಲಿ ಬಾಬರ್ ಆಜಂ ಹಾಗೂ ಸೌರಭ್ ಇದ್ದರು. 14 ವರ್ಷಗಳ ಬಳಿಕ ಅಮೆರಿಕ ಪರವಾಗಿ ಆಡುತ್ತಿರುವ ಸೌರಭ್ ಸೂಪರ್ ಓವರ್‌ನಲ್ಲಿ ಸೂಪರ್ ಜಯ ತಂದುಕೊಡುವ ಮೂಲಕ ಪಾಕಿಸ್ತಾನದ ವಿರುದ್ಧ ಸೇಡು ತೀರಿಸಿಕೊಂಡರು. ಕ್ರಿಕೆಟ್ ಅಷ್ಟೇ ಅಲ್ಲದೇ ಒರಾಕಲ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿಯೂ ಸೌರಭ್ ಛಾಪು ಮೂಡಿಸಿದ್ದಾರೆ.

ಮೂಡಿಗೆರೆಯ ಮಾಯಾವಿ

ಪಾಕಿಸ್ತಾನದ ವಿರುದ್ಧ ಭರ್ಜರಿ ಬೌಲಿಂಗ್ ಪ್ರದರ್ಶನ ನೀಡಿ 3 ವಿಕೆಟ್ ಪಡೆದು ಮಿಂಚಿದ ನೋಷ್ತುಶ್ ಕೆಂಜಿಗೆ ಚಿಕ್ಕಮಗಳೂರಿನವರು. ಪಂದ್ಯದ ಆರಂಭದಲ್ಲಿ 2 ಪ್ರಮುಖ ವಿಕೆಟ್ ಕಬಳಿಸಿದ ಕೆಂಜಿಗೆ ಪಾಕಿಸ್ತಾನ ತಂಡ ಒತ್ತಡಕ್ಕೆ ಸಿಲುಕುವಂತೆ ಮಾಡಿದರು. ಇದರಿಂದಾಗಿ ಪಾಕಿಸ್ತಾನ ಬೃಹತ್ ಮೊತ್ತ ಗಳಿಸುವಲ್ಲಿ ವಿಫಲವಾಯಿತು.

ಕ್ರಿಕೆಟ್‌ನ 'ನಿತೀಶ್‌ಕುಮಾರ್'

ಅಧಿಕಾರಕ್ಕಾಗಿ ಮೈತ್ರಿಕೂಟ ಬದಲಿಸುವ ಜೆಡಿಯುನ ನಿತೀಶ್ ಕುಮಾರ್‌ರಂತೆ, ಕ್ರಿಕೆಟ್‌ಗಾಗಿ ನಿತೀಶ್ ಕುಮಾರ್ ಎಂಬ ಆಟಗಾರ ಹಲವು ಬಾರಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿದ್ದಾರೆ. ಕೆನಡಾದಲ್ಲಿ ಜನಿಸಿದ ನಿತೀಶ್ ಅ-15 ಆಟಗಾರನಾಗಿ ಮೊದಲು ಕ್ರಿಕೆಟ್ ಜೀವನ ಆರಂಭಿಸಿದರು. ಅವಕಾಶ ತಪ್ಪುತ್ತಿದ್ದಂತೆ ಅಮೆರಿಕಕ್ಕೆ ತೆರಳಿ ಅಲ್ಲಿನ ಅ-15 ತಂಡದಲ್ಲಿ ಸ್ಥಾನ ಪಡೆದುಕೊಂಡರು. ಬಳಿಕ ಇಂಗ್ಲೆಂಡ್ ಪ್ರಯಾಣಿಸಿ ಅಲ್ಲಿನ ಕ್ಲಬ್‌ಗಳಿಗಾಗಿ ಆಡಿದರು. ಬಳಿಕ ಕೆನಡಾಗೆ ತೆರಳಿ ಅ-19 ತಂಡದಲ್ಲಿ ಸ್ಥಾನ ಪಡೆದುಕೊಂಡರು. ಇದೀಗ ಮತ್ತೆ ಅಮೆರಿಕಕ್ಕೆ ಪ್ರಯಾಣಿಸಿರುವ ಟಿ20 ವಿಶ್ವಕಪ್‌ನಲ್ಲಿ ಅಮೆರಿಕ ಪರ ಆಡುತ್ತಿದ್ದಾರೆ.

ಐಪಿಎಲ್ ಆಟಗಾರರು

ಐಪಿಎಲ್‌ನಲ್ಲಿ ಆಡಿದ್ದ ಹಲವು ಆಟಗಾರರು ಈಗ ಅಮೆರಿಕ ಕ್ರಿಕೆಟ್ ತಂಡದ ಭಾಗವಾಗಿದ್ದಾರೆ. ಎಡಗೈ ಸ್ಪಿನ್ನರ್ ಹರ್ಮೀತ್ ಸಿಂಘರ್ ಈ ಹಿಂದೆ ಮುಂಬೈ ಹಾಗೂ ರಾಜಸ್ಥಾನದ ಪರವಾಗಿ ಆಡಿದ್ದರು. ಅಲ್ಲದೇ ಆರ್‌ಸಿಬಿ ತಂಡದ ಭಾಗವಾಗಿದ್ದ ಮಿಲಿಂದ್ ಕುಮಾರ್ ಸಹ ಈಗ ಅಮೆರಿಕ ತಂಡದಲ್ಲಿದ್ದಾರೆ.

ಟಿ20 ವಿಶ್ವಕಪ್‌ನಲ್ಲಿ ಕೆನಡಾಗೆ ಮೊದಲ ಜಯ

ಐರ್ಲೆಂಡ್ ವಿರುದ್ಧ 12 ರನ್‌ಗಳ ರೋಚಕ ಗೆಲುವು

ನಿಕೋಲಸ್ ಕಿರ್ಟನ್ 49, ಕನ್ನಡಿಗ ಶ್ರೇಯಸ್ 37 ರನ್

ನ್ಯೂಯಾರ್ಕ್: ಇಲ್ಲಿನ ನಾಸಾವು ಮೈದಾನದಲ್ಲಿ ಶುಕ್ರವಾರ ನಡೆದ ಟಿ20 ವಿಶ್ವಕಪ್ 13ನೇ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ಕೆನಡಾ 12 ರನ್‌ಗಳ ರೋಚಕ ಜಯ ಗಳಿಸಿದೆ. ನಿಕೋಲಸ್ ಕಿರ್ಟನ್, ಕನ್ನಡಿಗ ಶ್ರೇಯಸ್ ಮೋವಾ ಬ್ಯಾಟಿಂಗ್ ಮತ್ತು ಜೆರೆಮಿ ಗಾರ್ಡನ್ ಮತ್ತು ದಿಲ್ಲನ್ ಹೇಲಿಗರ್ ಬೌಲಿಂಗ್ ಬಲದೊಂದಿಗೆ ಗೆದ್ದಿರುವ ಕೆನಡಾ, 2 ಅಂಕದೊಂದಿಗೆ ಗ್ರೂಪ್ 'ಎ'ಯಲ್ಲಿ 3ನೇ ಸ್ಥಾನಕ್ಕೇರಿದೆ. ಸತತ 2 ಪಂದ್ಯ ಸೋತಿರುವ ಐರ್ಲೆಂಡ್ ತಳ ಸೇರಿದೆ. ಅಮೆರಿಕ ಮತ್ತು ಕೆನಡಾ ಈ ಪಟ್ಟಿಯಲ್ಲಿ ಸದ್ಯ ಅಗ್ರ 2 ಸ್ಥಾನಗಳಲ್ಲಿವೆ.

ಮೊದಲು ಬ್ಯಾಟಿಂಗ್ ಮಾಡಿದ ಕೆನಡಾದಿಂದ, ಕಿರ್ಟನ್ 35 ಎಸೆತಗಳಲ್ಲಿ 49 ರನ್ ಸಿಡಿಸಿದರೆ, ದಾವಣಗೆರೆಯ ಶ್ರೇಯಸ್ 37 ರನ್ ಸೇರಿಸಿ ತಂಡಕ್ಕೆ ನೆರವಾದರು. ಕೆನಡಾ, 20 ಓವರ್‌ಗಳಲ್ಲಿ 137 ರನ್ ಗಳಿಸಿತು. ಇದಕ್ಕೆ ಪ್ರತ್ಯುತ್ತರವಾಗಿ ಐರ್ಲೆಂಡ್, 20 ಓವರ್‌ಗಳಲ್ಲಿ 125 ರನ್ ಗಳಿಸಲಷ್ಟೇ ಶಕ್ತವಾಯಿತು.

ಪಂದ್ಯದ ತಿರುವು

ಕೊನೇ 12 ಎಸೆತಗಳಲ್ಲಿ ಐರ್ಲೆಂಡ್ ಗೆಲುವಿಗೆ 28 ರನ್ ಬೇಕಾಗಿತ್ತು. 19ನೇ ಓವರ್‌ನಲ್ಲಿ ಅಡ್ಶೆರ್ 2 ಫೋರ್ ಬಾರಿಸಿ ತಂಡವನ್ನು ಗೆಲುವಿನ ಸನಿಹಕ್ಕೆ ತಂದರು. ಆದರೆ 19.2ನೇ ಓವರ್‌ನಲ್ಲಿ ಅಡ್ಶೆರ್ ಔಟಾಗುತ್ತಲೇ ಐರ್ಲೆಂಡ್ ಸೋಲು ಖಚಿತವಾಯಿತು.

ಸಂಕ್ಷಿಪ್ತ ಸ್ಕೋರ್: ಕೆನಡಾ 20 ಓವರ್, 137/7 (ಕಿರ್ಟನ್ 49, ಶ್ರೇಯಸ್ 37, ಮೆಕಾರ್ತಿ 24ಕ್ಕೆ 2), ಐರ್ಲೆಂಡ್ 20 ಓವರ್, 125/7 (ಡಾಕ್ರೆಲ್ 30, ಅಡ್ಶೆರ್ 34, ಜೆರೆಮಿ 16ಕ್ಕೆ 2)

ಟಿ20: ನಮೀಬಿಯಾ ವಿರುದ್ಧ ಸ್ಕಾಟ್ಲೆಂಡ್ ತಂಡಕ್ಕೆ 5 ವಿಕೆಟ್‌ಗಳ ಭಾರಿ ಜಯ

ಬ್ರಿಡ್ಜ್‌ಟೌನ್: ಶುಕ್ರವಾರದ ಟಿ20 ವಿಶ್ವಕಪ್ ಪಂದ್ಯದಲ್ಲಿ ನಮೀಬಿಯಾವನ್ನು 5 ವಿಕೆಟ್‌ಗಳಿಂದ ಮಣಿಸಿರುವ ಸ್ಕಾಟ್ಲೆಂಡ್ ತಂಡ ಬಿ ವಿಭಾಗದ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸಿದೆ. ಬ್ರಿಡ್ಜ್‌ಟೌನ್‌ನಲ್ಲಿ ನಡೆದ ಮುಖಾಮುಖಿಯಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ನಮೀಬಿಯಾ 9 ವಿಕೆಟಿಗೆ 155 ರನ್ ಬಾರಿಸಿದರೆ, ಸ್ಕಾಟ್ಲೆಂಡ್ 18.3 ಓವರ್‌ಗಳಲ್ಲಿ 5 ವಿಕೆಟಿಗೆ 157 ರನ್ ಬಾರಿಸಿ ಗೆಲುವಿನ ಖಾತೆ ತೆರೆಯಿತು. ಸ್ಕಾಟ್ಲೆಂಡ್-ಇಂಗ್ಲೆಂಡ್ ನಡುವಿನ ಮೊದಲ ಪಂದ್ಯ ಮಳೆಯಿಂದ ರದ್ದುಗೊಂಡ ಕಾರಣ ಅಂಕವನ್ನು ಹಂಚಲಾಗಿತ್ತು. ಚೇಸಿಂಗ್ ವೇಳೆ ರಿಚಿ ಬೇರಿಂಗ್ಟನ್ ಅಜೇಯ 47, ಕೆಳ ಕ್ರಮಾಂಕದ ಆಟಗಾರ ಮೈಕಲ್ ಲೀಸ್ಕ್ 35, ಆರಂಭಕಾರ ಮೈಕಲ್ ಜೋನ್ಸ್ 26 ರನ್ ಮಾಡಿದರು. 17 ಎಸೆತಗಳ ಬ್ಯಾಟಿಂಗ್ ವೇಳೆ 4 ಸಿಕ್ಸರ್ ಬಾರಿಸಿ, ಒಂದು ವಿಕೆಟ್ ಕೂಡ ಉರುಳಿಸಿದ ಲೀಸ್ಕ್ ಪಂದ್ಯಶ್ರೇಷ್ಠ ಗೌರವಕ್ಕೆ ಭಾಜನರಾದರು.

ಪಂದ್ಯಶ್ರೇಷ್ಠ: ಮೈಕಲ್ ಲೀಸ್ಕ್.

ಭಾರತ, ಪಾಕ್ ಪಂದ್ಯದ ಟಿಕೆಟ್ ದುಬಾರಿ: ಅಭಿಮಾನಿಗಳ ಬೇಸರ

ನ್ಯೂಯಾರ್ಕ್: ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಆದರೆ ಈ ಪಂದ್ಯದ ಟಿಕೆಟ್ ಬೆಲೆ ದುಬಾರಿಯಾಗಿದ್ದು, ಅಭಿಮಾನಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯಕ್ಕೆ 20 ಲಕ್ಷಕ್ಕೂ ಅಧಿಕ ಜನರಿಂದ ಟಿಕೆಟ್‌ಗೆ ಬೇಡಿಕೆ ಬಂದಿತ್ತು. ಹೀಗಾಗಿ ಎಲ್ಲರಿಗೂ ಟಿಕೆಟ್ ಒದಗಿಸುವುದು ಕಷ್ಟವಾಯಿತು ಎಂದು ಅಮೆರಿಕ ಕ್ರಿಕೆಟ್ ಸಂಸ್ಥೆಯ ಮುಖ್ಯಸ್ಥ ವೇಣು ಹೇಳಿದ್ದಾರೆ. ಪೆನ್ಸಿಲ್ವೇನಿಯಾದ ಎಂಜಿನಿಯರ್ ಒಬ್ಬರು ಈ ಬಗ್ಗೆ ಮಾತನಾಡಿ, ಭಾರತ ಮತ್ತು ಪಾಕಿಸ್ತಾನದ ನಡುವಿನ ಪಂದ್ಯಕ್ಕೆ 300 ಡಾಲರ್ (25000 ರೂ.) ನಿಗದಿ ಪಡಿಸಲಾಗಿದೆ. ಆದರೆ ಈ ಸೀಟ್‌ಗಳ ಪ್ರಮಾಣ ಕಡಿಮೆ ಇದ್ದು, ಈಗಾಗಲೇ ಮಾರಾಟವಾಗಿವೆ. ಉಳಿದಿರುವುದು ಐಶಾರಾಮಿ ಟಿಕೆಟ್ ಮಾತ್ರ ಉಳಿದಿವೆ ಇದರ ಬೆಲೆ 2500 ಡಾಲರ್‌ನಿಂದ 10000 ಡಾಲರ್‌ನಷ್ಟಿದೆ (2.8 ಲಕ್ಷ ರೂ.ನಿಂದ 8.3 ಲಕ್ಷ ರೂ.). ಇವುಗಳನ್ನು ಖರೀದಿ ಮಾಡಲು ಎಲ್ಲರಿಗೂ ಸಾಧ್ಯವಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಚೆಸ್: ಅಂತಿಮ ಸುತ್ತಲ್ಲಿ ಕರುವಾನ ವಿರುದ್ಧ ಪ್ರಜ್ಞಾನಂದಗೆ ಸೋಲು

ಸ್ಟಾವಂಜರ್ (ನಾರ್ವೆ): ಇಲ್ಲಿ ನಡೆದ ನಾರ್ವೆ ಚೆಸ್ ಟೂರ್ನಿಯ 9ನೇ ಮತ್ತು ಅಂತಿಮ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಸೋಲನುಭವಿಸಿದ್ದಾರೆ. ಅಮೆರಿಕದ ಫ್ಯಾಬಿಯಾನೊ ಕರುವಾನ ವಿರುದ್ಧ ಸೋತಿರುವ ಅವರು, 13 ಅಂಕಗಳೊಂದಿಗೆ 3ನೇ ಸ್ಥಾನದಲ್ಲಿ ಸ್ಪರ್ಧೆ ಮುಗಿಸಿದ್ದಾರೆ. ಮಹಿಳಾ ವಿಭಾಗದಲ್ಲಿ ಆರ್.ವೈಶಾಲಿಗೂ 3ನೇ ಸ್ಥಾನ ಲಭಿಸಿದೆ. ಪುರುಷರ ವಿಭಾಗದಲ್ಲಿ ವಿಶ್ವ ನಂ.1 ಮ್ಯಾಗ್ನಸ್ ಕಾರ್ಲ್‌ಸನ್ ಒಟ್ಟು 16 ಅಂಕಗಳೊಂದಿಗೆ ವಿಜೇತರಾಗಿದ್ದಾರೆ. ಅಂಕಪಟ್ಟಿಯ ದ್ವಿತೀಯ ಸ್ಥಾನದಲ್ಲಿ ಅಮೆರಿಕದ ಹಿಕಾರು ನಕಮುರ (14.5) ಇದ್ದಾರೆ. ಮಹಿಳಾ ವಿಭಾಗದಲ್ಲಿ ಚೀನಾದ ವೆನ್ಜುಂಜು 16 ಅಂಕಗಳೊಂದಿಗೆ ಪ್ರಥಮಸ್ಥಾನಿಯಾದರೆ, ಅದೇ ದೇಶದ ಟಿಂಗ್ಜಿ ಲೆಯಿ ಮತ್ತು ಉಕ್ರೇನ್‌ನ ಅನ್ನಾ ಮುಜಿಚುಕ್ ತಲಾ 14.5 ಅಂಕದಿಂದ ದ್ವಿತೀಯ ಸ್ಥಾನದಲ್ಲಿದ್ದಾರೆ. ತೃತೀಯ ಸ್ಥಾನಿ ವೈಶಾಲಿಗೆ 11.5 ಅಂಕ ಲಭಿಸಿದೆ.

ಫ್ರೆಂಚ್ ಓಪನ್: ಅಲ್ಕರಾಜ್ ಫೈನಲ್‌ಗೆ

ಸಿನ್ನರ್ ವಿರುದ್ಧ 5 ಸೆಟ್‌ಗಳ ಮ್ಯಾರಥಾನ್ ಗೆಲುವು

ಪ್ಯಾರಿಸ್: ಪ್ರತಿಷ್ಠಿತ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ನಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಸೆಮಿಫೈನಲ್‌ನಲ್ಲಿ ಅವರು, ಇಟಲಿಯ ಜಾನಿಕ್ ಸಿನ್ನರ್ ವಿರುದ್ಧ 5 ಸೆಟ್‌ಗಳ ಮ್ಯಾರಥಾನ್ ಪಂದ್ಯದಲ್ಲಿ ಗೆದ್ದಿದ್ದಾರೆ. ಸಿನ್ನರ್ ವಿರುದ್ಧ ಅಲ್ಕರಾಜ್, 2-6, 6-3, 3-6, 6-4, 6-3ರ ಜಯ ಗಳಿಸಿದರು.

ದಿಗ್ಗಜರಿಲ್ಲದ ಫೈನಲ್: ಈ ಬಾರಿಯ ಫ್ರೆಂಚ್ ಓಪನ್‌ನ ಫೈನಲ್‌ನಲ್ಲಿ ಟೆನಿಸ್ ದಿಗ್ಗಜರಾದ ರೋಜರ್ ಫೆಡರರ್, ನೊವಾಕ್ ಜೊಕೋವಿಚ್, ರಾಫೆಲ್ ನಡಾಲ್ ಪಾಲ್ಗೊಳ್ಳುತ್ತಿಲ್ಲ. ಫ್ರೆಂಚ್ ಓಪನ್ ಇತಿಹಾಸದಲ್ಲಿ 20 ವರ್ಷಗಳ ಬಳಿಕ ಈ ಮೂವರಲ್ಲಿ ಯಾರೂ ಇಲ್ಲದೆ ಫೈನಲ್ ಪಂದ್ಯ ನಡೆಯಲಿದೆ. 2004ರಲ್ಲೂ ನಡಾಲ್, ಫೆಡರರ್, ಜೊಕೋವಿಚ್ ಇಲ್ಲದೆ ಫೈನಲ್ ನಡೆದಿತ್ತು.

ಇಂದು ಮಹಿಳಾ ಸಿಂಗಲ್ಸ್ ಫೈನಲ್

ಶನಿವಾರ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಪೋಲೆಂಡ್‌ನ ತಾರೆ ಇಗಾ ಸ್ವಿಯಾಟೆಕ್ ಮತ್ತು ಇಟಲಿಯ ಜಾಸ್ಮಿನ್ ಪವೊಲಿನಿ ಸೆಣಸಾಡಲಿದ್ದಾರೆ. ಸೆಮಿಫೈನಲ್‌ನಲ್ಲಿ ಇಗಾ, ಅಮೆರಿಕದ ಕೊಕೊ ಗಾಫ್ ವಿರುದ್ಧ ಗೆದ್ದು ಫೈನಲ್‌ಗೇರಿದ್ದರೆ, ಪವೊಲಿನಿ ರಷ್ಯಾದ ಮೀರಾ ಆ್ಯಂಡ್ರೀವಾ ವಿರುದ್ಧ ಜಯ ಗಳಿಸಿದ್ದರು.

ಐಸಿಐಸಿಐ ಹೋಮ್ ಫೈನಾನ್ಸ್ | **ಕಾರ್ಪೊರೇಟ್ ಕಚೇರಿ:** ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ-400059, ಭಾರತ
ಶಾಖಾ ಕಚೇರಿ: 2ನೇ ಮಹಡಿ, ಸಪ್ತ ಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಮ್ ಪಕ್ಕ, ಅಗ್ನಿಶಾಮಕ ದಳದ ಹತ್ತಿರ, ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು- 570009

(ನಿಯಮ 8(6)ರ ನಿಬಂಧನೆಯನ್ನು ನೋಡಿ)

ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ನೋಟೀಸು

ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾದ ಹಣಕಾಸು ಸ್ವತ್ತುಗಳ ಭದ್ರತೀಕರಣ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ನೋಟೀಸು.
ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಖಾತಂದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಸುರಕ್ಷಿತ ಸಾಲಗಾರರು ಅಡಮಾನಕ್ಕೆ /ಹೊಣೆಗಾರಿಕೆಗೆ ನೀಡಿದ್ದು, ಅದು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯ **ಭೌತಿಕ ಸ್ವಾಧೀನ** ಹಂತದಲ್ಲಿದ್ದು ಅದನ್ನು "ಹೇಗಿದೆಯೋ ಹಾಗೆ", "ಎಲ್ಲಿದೆಯೋ ಅಲ್ಲಿ" ಮತ್ತು "ಯಥಾಸ್ಥಿತಿಯಲ್ಲಿ" ಈ ಕೆಳಗೆ ನೀಡಿರುವ ಸಂಕ್ಷಿಪ್ತ ವಿವರಣೆಯ ಪ್ರಕಾರ ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರ(ರು) / ಸಹ ಸಾಲಗಾರರು / ಜಾಮೀನುದಾರರು / ಕಾನೂನು ಉತ್ತರಾಧಿಕಾರಿಗಳ ಹೆಸರು / ಸಾಲ ಖಾತೆ ಸಂಖ್ಯೆ	ಸಂರಕ್ಷಿತ ಆಸ್ತಿ(ಗಳ) ವಿವರಗಳು ತಿಳಿದಿರುವ ಹೊರೆಗಳೊಂದಿಗೆ	ಯಾವುದಾದರೂ ಇದ್ದಲ್ಲಿ	ಬಾಕಿ ಮೊತ್ತ ಕಾದಿರಿಸಿದ ಬೆಲೆ / ಮುಂಗಡ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಅರುಣ್‌ಕುಮಾರ್ ಸಿ (ಸಾಲಗಾರ) ಪ್ರಮೀಳತಾ ಬರ್ನುಬಸ್ ಈಡನ್ (ಸಹ-ಸಾಲಗಾರ) ಸಾಲದ ಖಾತೆ ಸಂಖ್ಯೆ. LHMYS00001299262 LHMYS00001298617	ಹಳೆಯ ಆಸ್ತಿ ಸಂಖ್ಯೆ LIG 5 1ನೇ ವಾರ್ಡ್ ಸಂಖ್ಯೆ 15 ಕುವೆಂಪುನಗರ ಲೇಔಟ್ ಕೆಎಚ್‌ಬಿ ಕಾಲೋನಿ ಮಂಡ್ಯ ನಾ ಮಂಡ್ಯ ಕರ್ನಾಟಕ-571401	ರೂ. 42,22,759/- ಜೂನ್ 04, 2024	ರೂ. 58,54,500/- ರೂ. 5,85,450/-	ಜುಲೈ 08, 2024ರಂದು ಪೂರ್ವಾಹ್ನ 11:00 - ಅಪರಾಹ್ನ 03:00	ಜುಲೈ 16, 2024ರಂದು ಅಪರಾಹ್ನ 2:00 - 3:00

ಆನ್‌ಲೈನ್ ಹರಾಜನ್ನು ನಮ್ಮ ಹರಾಜು ಏಜೆನ್ಸಿ **GlobeTech**ನ ವೆಬ್‌ಸೈಟ್‌ನಲ್ಲಿ (**URL Link-/ https://BestAuctionDeal.com**) ನಡೆಸಲಾಗುವುದು. ಅಡಮಾನದಾರರಿಗೆ ನೋಟೀಸಿನ ಮೂಲಕ ಒಟ್ಟು ಬಾಕಿಯನ್ನು ಹೆಚ್ಚುವರಿ ಬಡ್ಡಿಯೊಂದಿಗೆ ಪಾವತಿಸಲು **ಜುಲೈ 15, 2024**ರ **ಅಪರಾಹ್ನ 5.00**ರವರೆಗೆ ಕೊನೆಯ ಅವಕಾಶವನ್ನು ನೀಡಲಾಗಿದೆ. ವಿಫಲವಾದಲ್ಲಿ ಮೇಲಿನ ವೇಳಾಪಟ್ಟಿಯ ಪ್ರಕಾರ ಈ ಸುರಕ್ಷಿತ ಸ್ವತ್ತುಗಳನ್ನು ಮಾರಾಟ ಮಾಡಲಾಗುತ್ತದೆ.
ನಿರೀಕ್ಷಿತ ಬಿಡ್‌ದಾರ(ರು) ಮುಂಗಡ ಹಣ ಠೇವಣಿ (ಇಎಂಡಿ) ಆರ್‌ಟಿಜಿಎಸ್/ ಡಿಮಾಂಡ್ ಡ್ರಾಫ್ಟ್ (ಡಿಡಿ)ನ್ನು (ಕಾಲಮ್ ಇ ನೋಡಿ) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪೆನಿ ಲಿಮಿಟೆಡ್, 2ನೇ ಮಹಡಿ, ಸಪ್ತ ಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಮ್ ಪಕ್ಕ, ಅಗ್ನಿಶಾಮಕ ದಳದ ಹತ್ತಿರ, ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು- 570009** ಇಲ್ಲಿ **ಜುಲೈ 15, 2024**ರಂದು **ಅಪರಾಹ್ನ 04:00**ರೊಳಗೆ ಅಥವಾ ಅದಕ್ಕೂ ಮೊದಲು ಮೊದಲು ಸಲ್ಲಿಸತಕ್ಕದ್ದು. ನಿರೀಕ್ಷಿತ ಬಿಡ್‌ದಾರ(ರು) ನೋಂದಣಿ ಫಾರ್ಮ್ ಮತ್ತು ಬಿಡ್ ನಿಯಮಗಳು ಮತ್ತು ಷರತ್ತುಗಳ ಫಾರ್ಮ್‌ನ ಸಹಿಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪೆನಿ ಲಿಮಿಟೆಡ್, 2ನೇ ಮಹಡಿ, ಸಪ್ತ ಸ್ವರ ಕಾಂಪ್ಲೆಕ್ಸ್, ಪ್ಯಾಲೇಸ್ ಹೋಂಡಾ ಶೋ ರೂಮ್ ಪಕ್ಕ, ಅಗ್ನಿಶಾಮಕ ದಳದ ಹತ್ತಿರ, ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು- 570009** ಇಲ್ಲಿ **ಜುಲೈ 15, 2024**ರಂದು **ಅಪರಾಹ್ನ 05.00**ರೊಳಗೆ ಅಥವಾ ಅದಕ್ಕೂ ಮೊದಲು ಸಲ್ಲಿಸತಕ್ಕದ್ದು. ಮುಂಗಡ ಹಣ ಠೇವಣಿ ಡಿಮಾಂಡ್ ಡ್ರಾಫ್ಟ್ (ಡಿಡಿ) **"ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು"** ಪರವಾಗಿ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ಪಡೆದಿದ್ದು **ಬೆಂಗಳೂರಿನಲ್ಲಿ** ಪಾವತಿಯಾಗುವಂತಿರಬೇಕು.
ಪರಿಶೀಲನೆ, ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಅಥವಾ ಟೆಂಡರ್‌ಗಳ ಸಲ್ಲಿಕೆಗಾಗಿ, ದಯವಿಟ್ಟು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್** ಅನ್ನು **9920807300** ಅಥವಾ ನಮ್ಮ **ಮಾರಾಟ ಮತ್ತು ಮಾರ್ಕೆಟಿಂಗ್ ಪಾಲುದಾರ NexXen Solutions Private Limited** ನ್ನು ಸಂಪರ್ಕಿಸಬಹುದು.
ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **https://www.icicihfc.com/** ಗೆ ಭೇಟಿ ನೀಡಿ.

ದಿನಾಂಕ : ಜೂನ್ 08, 2024 ಅಧಿಕೃತ ಅಧಿಕಾರಿ
ಸ್ಥಳ : ಮಂಡ್ಯ ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ಐಸಿಐಸಿಐ ಹೋಮ್ ಫೈನಾನ್ಸ್ | **ಕಾರ್ಪೊರೇಟ್ ಕಚೇರಿ:** ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ-400059, ಭಾರತ
ಶಾಖಾ ಕಚೇರಿ: 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು - 560066

(ನಿಯಮ 8(6)ರ ನಿಬಂಧನೆಯನ್ನು ನೋಡಿ)

ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ನೋಟೀಸು

ಹಣಕಾಸು ಸ್ವತ್ತುಗಳ ಭದ್ರತೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆ 2002ರ ಅನುಷ್ಠಾನದ ಅಡಿಯಲ್ಲಿ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ಓದಲಾದ ನಿಯಮ 8 (6)ರ ನಿಬಂಧನೆಯೊಂದಿಗೆ ಸ್ಥಿರ ಸ್ವತ್ತುಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ನೋಟೀಸು.
ಈ ನೋಟೀಸಿನ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಖಾತರಿದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಸಾಲಗಾರರು/ಖಾತರಿದಾರರು ಸಂರಕ್ಷಿತ ಸಾಲದಾತರಿಗೆ ಅಡಮಾನಕ್ಕೆ /ಹೊಣೆಗಾರಿಕೆಗೆ ನೀಡಿದ್ದಾರೆ. ಪ್ರಸಕ್ತ ಅದು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರ **ಸಾಂಕೇತಿಕ ಸ್ವಾಧೀನ**ದಲ್ಲಿದ್ದು, ಅದನ್ನು "ಹೇಗಿದೆಯೋ ಹಾಗೆ", "ಎಲ್ಲಿದೆಯೋ ಅಲ್ಲಿ" ಮತ್ತು "ಯಥಾಸ್ಥಿತಿಯಲ್ಲಿ" ಈ ಕೆಳಗೆ ನೀಡಿರುವ ಸಂಕ್ಷಿಪ್ತ ವಿವರಣೆಗಳ ಪ್ರಕಾರ ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರ(ರು) / ಸಹ ಸಾಲಗಾರರು / ಜಾಮೀನುದಾರರು / ಕಾನೂನು ಉತ್ತರಾಧಿಕಾರಿಗಳ ಹೆಸರು / ಸಾಲ ಖಾತೆ ಸಂಖ್ಯೆ.	ಸಂರಕ್ಷಿತ ಆಸ್ತಿ(ಗಳ) ವಿವರಗಳು ತಿಳಿದಿರುವ ಹೊರೆಗಳೊಂದಿಗೆ.	ಯಾವುದಾದರೂ ಇದ್ದಲ್ಲಿ.	ಬಾಕಿ ಮೊತ್ತ ಕಾದಿರಿಸಿದ ಬೆಲೆ / ಮುಂಗಡ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಮೋಹನ್ ಕೆ ಪಿ (ಸಾಲಗಾರ) ಛಾಯಾ ಎಂ ಕೆ (ಸಹ ಸಾಲಗಾರ) ಸಾಲ ಖಾತೆ ಸಂಖ್ಯೆ. LHBNG00001289491	ಮನೆ ನಂ. 368 ಬೆಂಗಳೂರು 1 ಕೆಂಗೇರಿ ಸ್ಯಾಟಲೈಟ್ ಟೌನ್ 2ನೇ ರಸ್ತೆ, ಕೆಂಗೇರಿ ಬೆಂಗಳೂರು, ಕರ್ನಾಟಕ-500856	ರೂ. 65,74,920/- ಜೂನ್ 04, 2024	ರೂ. 47,79,000/- ರೂ. 4,77,900/-	ಜುಲೈ 08, 2024ರಂದು ಪೂರ್ವಾಹ್ನ 11:00 - ಅಪರಾಹ್ನ 03:00	ಜುಲೈ 16, 2024ರಂದು ಅಪರಾಹ್ನ 2:00 - 3:00

ಆನ್‌ಲೈನ್ ಹರಾಜನ್ನು ನಮ್ಮ ಹರಾಜು ಏಜೆನ್ಸಿ **GlobeTech**ನ ವೆಬ್‌ಸೈಟ್‌ನಲ್ಲಿ (**URL Link-/ https://BestAuctionDeal.com**) ನಡೆಸಲಾಗುವುದು. ಅಡಮಾನದಾರರಿಗೆ ನೋಟೀಸಿನ ಮೂಲಕ ಒಟ್ಟು ಬಾಕಿಯನ್ನು ಹೆಚ್ಚುವರಿ ಬಡ್ಡಿಯೊಂದಿಗೆ ಪಾವತಿಸಲು **ಜುಲೈ 15, 2024**ರ **ಅಪರಾಹ್ನ 5.00**ರವರೆಗೆ ಕೊನೆಯ ಅವಕಾಶವನ್ನು ನೀಡಲಾಗಿದೆ. ವಿಫಲವಾದಲ್ಲಿ ಮೇಲಿನ ವೇಳಾಪಟ್ಟಿಯ ಪ್ರಕಾರ ಈ ಸುರಕ್ಷಿತ ಸ್ವತ್ತುಗಳನ್ನು ಮಾರಾಟ ಮಾಡಲಾಗುತ್ತದೆ.
ನಿರೀಕ್ಷಿತ ಬಿಡ್‌ದಾರ(ರು) ಮುಂಗಡ ಹಣ ಠೇವಣಿ (ಇಎಂಡಿ) ಆರ್‌ಟಿಜಿಎಸ್/ ಡಿಮಾಂಡ್ ಡ್ರಾಫ್ಟ್ (ಡಿಡಿ)ನ್ನು (ಕಾಲಮ್ ಇ ನೋಡಿ) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪೆನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್ ಫೀಲ್ಡ್, ಬೆಂಗಳೂರು - 560066** ಇಲ್ಲಿ **ಜುಲೈ 15, 2024**ರಂದು **ಅಪರಾಹ್ನ 04:00**ರೊಳಗೆ ಅಥವಾ ಅದಕ್ಕೂ ಮೊದಲು ಮೊದಲು ಸಲ್ಲಿಸತಕ್ಕದ್ದು. ನಿರೀಕ್ಷಿತ ಬಿಡ್‌ದಾರ(ರು) ನೋಂದಣಿ ಫಾರ್ಮ್ ಮತ್ತು ಬಿಡ್ ನಿಯಮಗಳು ಮತ್ತು ಷರತ್ತುಗಳ ಫಾರ್ಮ್‌ನ ಸಹಿಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪೆನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯ ರಸ್ತೆ, ವೈಟ್ ಫೀಲ್ಡ್, ಬೆಂಗಳೂರು - 560066** ಇಲ್ಲಿ **ಜುಲೈ 15, 2024**ರಂದು **ಅಪರಾಹ್ನ 05.00**ರೊಳಗೆ ಅಥವಾ ಅದಕ್ಕೂ ಮೊದಲು ಸಲ್ಲಿಸತಕ್ಕದ್ದು. ಮುಂಗಡ ಹಣ ಠೇವಣಿ ಡಿಮಾಂಡ್ ಡ್ರಾಫ್ಟ್ (ಡಿಡಿ) **"ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು"** ಪರವಾಗಿ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ಪಡೆದಿದ್ದು **ಬೆಂಗಳೂರಿನಲ್ಲಿ** ಪಾವತಿಯಾಗುವಂತಿರಬೇಕು.
ಪರಿಶೀಲನೆ, ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಅಥವಾ ಟೆಂಡರ್‌ಗಳ ಸಲ್ಲಿಕೆಗಾಗಿ, ದಯವಿಟ್ಟು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್** ಅನ್ನು **9920807300** ಅಥವಾ ನಮ್ಮ **ಮಾರಾಟ ಮತ್ತು ಮಾರ್ಕೆಟಿಂಗ್ ಪಾಲುದಾರ NexXen Solutions Private Limited** ನ್ನು ಸಂಪರ್ಕಿಸಬಹುದು.
ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **https://www.icicihfc.com/** ಗೆ ಭೇಟಿ ನೀಡಿ.

ದಿನಾಂಕ : ಜೂನ್ 08, 2024 ಅಧಿಕೃತ ಅಧಿಕಾರಿ
ಸ್ಥಳ : ಬೆಂಗಳೂರು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಹೆಬ್ಬಾಳ ವಿಭಾಗ, 2ನೇ ಮಹಡಿ,
ಬೃ.ಬೆಂ.ಮ.ಪಾ ಕಟ್ಟಡ, ಜೆ.ಸಿ. ನಗರ ಮುಖ್ಯರಸ್ತೆ, ಮುನಿರೆಡ್ಡಿ ಪಾಳ್ಯ,
ಬೆಂಗಳೂರು-560 032.
ಸಂಖ್ಯೆ: ಕಾಪಾಅ/ಹೆಬ್ಬಾಳ/ಟೆಂಡರ್/03/2024-25 ದಿನಾಂಕ: 06.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳು ಕೆಡಬ್ಲ್ಯೂ-1/2)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ಜೆ.ಸಿ ನಗರ ಉಪ ವಿಭಾಗ ವಾರ್ಡ್ ಸಂಖ್ಯೆ-65, 66, 67 & 68ರಲ್ಲಿ ಮುಂಗಾರು ಅವಧಿಗೆ ತಾತ್ಕಾಲಿಕ ರಾತ್ರಿ ನಿಯಂತ್ರಣ ಕೊಠಡಿ ಸ್ಥಾಪಿಸುವುದು. (01.06.2024 ರಿಂದ 30.09.2024ರವರೆಗೆ) (2ನೇ ಕರೆ) ಅಂದಾಜು ಮೊತ್ತ: ರೂ.5.00 ಲಕ್ಷಗಳು ಇಎಂಡಿ: ರೂ.12,500/-
2.	ವಾರ್ಡ್ ಸಂಖ್ಯೆ-67 ಗಂಗಾನಗರದಲ್ಲಿ 2023-24ನೇ ಸಾಲಿಗೆ ಚರಂಡಿಗಳ ಹೂಳು ತೆಗೆಯುವುದು ಹೂಳು ಮತ್ತು ಅವಶೇಷಗಳನ್ನು ತೆರವುಗೊಳಿಸುವುದು. (2ನೇ ಕರೆ) ಅಂದಾಜು ಮೊತ್ತ: ರೂ.30.00 ಲಕ್ಷಗಳು ಇಎಂಡಿ: ರೂ.60,000/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: **07.06.2024**ರಿಂದ ಅಪ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **15.06.2024**ರ ಸಂಜೆ **4.00** ಗಂಟೆಯವರೆಗೆ. (3) ಆರ್ಥಿಕ ಬಿಡ್‌ಗಳನ್ನು ದಿನಾಂಕ **17.06.2024**ರ ಸಂಜೆ **4:30** ಗಂಟೆಯ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ